ಅ) ಹುಬ್ಬಳ್ಳಿ ಮಹಾನಗರ ಮಹಾದೇವ ಜವಳಿ ಗಿರಣಿಯ ಭಾಗವಾದ ಗಿರಣಿ ಹಾಳ ಪ್ರದೇಶದಲ್ಲಿ ಕಳೆದ ನಲವತ್ತು ವರ್ಷಗಳಿಂದ ಸಾವಿರಾರು ಜನರು ದೀನದಲಿತರು, ಹಿಂದುಳಿದವರು ಗುಡಿಸಲುಗಳನ್ನು ಹಾಕಿಕೊಂಡು ವಾಸವಾಗಿರುವುದು ನಿಜವಲ್ಲವೇ;

ಆ) ವಾಸವಾಗಿರುವ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸಲಾಗಿದೆಯೇ;

ಇ) ಈ ಪ್ರದೇಶದ ಜನರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆಯೇ;

ಈ) ವಿತರಿಸದೇ ಇದ್ದಲ್ಲಿ ಕಾರಣಗಳೇನು;

ಉ) ಯಾವಾಗ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗುವುದು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು):

ಅ) ಗಿರಣಿ ಹಾಳ ಕೊಳಚೆ ಪ್ರದೇಶದಲ್ಲಿ ನಿವಾಸಿಗಳು ಸುಮಾರು 30 ವರ್ಷಗಳಿಂದ ವಾಸಿಸುತ್ತಿದ್ದಾರೆ.

ಆ) ಗಿರಿಣಿ ಹಾಳ ಪ್ರದೇಶವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರ ಪ್ರಸ್ತಾವನೆ ಮೇರೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: HMA 316 MNI 76 ದಿನಾಂಕ: 31.08.1976ರಲ್ಲಿ ಅಧಿನಿಯಮ (3)ರನ್ವಯ ಅಂತಿಮವಾಗಿ ಘೋಷಣೆ ಹೊರಡಿಸಿದೆ.

ಇ) ಈ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ಇದುವರೆವಿಗೂ ವಿತರಿಸಿರುವುದಿಲ್ಲ. ಆದರೆ ಈ ಪ್ರದೇಶವು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವುದರಿಂದ ಮಹಾ ನಗರ ಪಾಲಿಕೆಯಿಂದ ಕೇವಲ ಪರಿಚಯ ಪತ್ರಗಳನ್ನು ಮಾತ್ರ ವಿತರಿಸಲಾಗುತ್ತಿದೆ.

ಈ) ಈ ಕೊಳಚೆ ಪ್ರದೇಶವು ಕರ್ನಾಟಕ ರಾಜ್ಯ ಜವಳಿ ಸಂಸ್ಥೆ (ಪ್ರೈವೇಟ್ ಲಿ., ಬೆಂಗಳೂರು) ಇವರ ಮಾಲೀಕತ್ವದಲ್ಲಿರುತ್ತದೆ. ಅಲ್ಲದೆ ಈವರೆವಿಗೂ ಯಾವುದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿಯಿಂದ ಹಕ್ಕು ಪತ್ರಗಳನ್ನು ವಿತರಿಸಲಾಗಿರುವುದಿಲ್ಲ. ಹಕ್ಕು ಪತ್ರ ವಿತರಣೆ ಬಗ್ಗೆ ಸರ್ಕಾರವು ದಿನಾಂಕ: 18.10.2004ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಭೂ ಒಡತನ ನೀಡುವ ಬಗ್ಗೆ ರೂಪರೇಷಗಳನ್ನು ಅಂತಿಮಗೊಳಿಸಲಾಗುತ್ತಿದೆ.

ಉ) ಸದರಿ ಪ್ರದೇಶವು ಕೆ.ಸಿ.ಟಿ. ಮಿಲ್‌ಗೆ ಸಂಬಂಧಿಸಿದ್ದು, ಈ ಪ್ರದೇಶವನ್ನು ಮಂಡಳಿಯ ಅಧಿನಿಯಮ 17ರ ಅಡಿಯಲ್ಲಿ ಭೂ ಸ್ವಾಧೀನ ಪಡಿಸಿಕೊಂಡಲ್ಲಿ ನಿಯಮಾನುಸಾರ ಹಕ್ಕುಪತ್ರಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು.

2493(3255) ಶ್ರೀ ಐವಾನ್ ನೇಗ್ಲಿ (ನಾಮನಿರ್ದೇಶಿತರು):-ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶುಶ್ರೂಷಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಶ್ವವಿದ್ಯಾಲಯ ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ;

ಆ) ಸರ್ಕಾರದಿಂದ ಶುಶ್ರೂಷಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಪ್ರಶಸ್ತಿಯನ್ನು ಅದರಲ್ಲೂ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವ ಪ್ರಸ್ತಾವನೆ ಇದೆಯೆ;

ಇ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಶುಶ್ರೂಷಾ ನಿಕಾಯದಿಂದ ಉಪಕುಲಸಚಿವರನ್ನು ನೇಮಕಾತಿ ಮಾಡುವ ಪ್ರಸ್ತಾವನೆ ಇದೆಯೇ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಹೌದು.

2494(2695) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ):–ಮಾನ್ಯ ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಶಿಕ್ಷಕರು/ ಉಪನ್ಯಾಸಕರ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು;

ಆ) ಖಾಲಿಯಿರುವ ಶಿಕ್ಷಕರ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ನಿರ್ಬಂಧ ವಿಧಿಸಿರುವುದು ನಿಜವೇ;

ಈ) ಹಾಗಿದ್ದರೆ, ಬಹು ಮುಖ್ಯವಾದ ಈ ಘಟ್ಟದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರಿಲ್ಲದೇ ಆಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರವು ಕೈಗೊಂಡ ತುರ್ತು ಕ್ರಮಗಳೇನು: (ವಿವರ ಒದಗಿಸುವುದು)?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ)

ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ	ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಸಂಖ್ಯೆ
2102	258

ಜಿಲ್ಲಾವಾರು ವಿವರದ ಪಟ್ಟಿಯನ್ನು ಅನುಬಂಧ–Iರಲ್ಲಿ ಲಗತ್ತಿಸಿದೆ.

ಆ) ಆರ್ಥಿಕ ಇಲಾಖೆಯ, ಮಿತವ್ಯಯಕ್ಕೆ ಸಂಬಂಧಿಸಿದ ದಿನಾಂಕ: 05.07.2004ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 02 ಬಿಇಎಂ 2003ರ ಪ್ರಕಾರ ಈ ಕೆಳಗೆ ಉದ್ಧರಿಸಿದಂತೆ ನಿಷೇಧವನ್ನು ವಿಧಿಸಲಾಗಿದೆ.

"(h) The ban on recruitment/ creation and filling up of posts also covers all grant-in aid institutions.